

## ನನ್ನ ಮರೀತೀಯಾ?

ನನ್ನ 6 ವರ್ಷದ ಮಗಳನ್ನು ಈಜು ತರಗತಿಯಿಂದ ಮನೆಗೆ ಕರೆತರುತ್ತಿದ್ದೆ. ದಾರಿಯಲ್ಲಿ ಮಗಳು ಬಹಳ ಭಾವನಾಪೂರಿತವಾದ ದನಿಯಲ್ಲಿ, 'ಅಮ್ಮಾ, ನೀನು ನನ್ನನ್ನು ಯಾವತ್ತಾದರೂ ಮರೆತು ಬಿಡಬಹುದಾ?' ಎಂದಳು. ಈ ಯೋಚನೆ ಇದೆಲ್ಲಿಂದ ಇವಳ ತಲೆಗೆ ಬಂತು ಅಂತ ತಲೆ ಕೆಡಿಸಿಕೊಳ್ಳುತ್ತಲೇ 'ಇಲ್ಲ ಪುಟ್ಟೀ, ಅದು ಹೇಗೆ ತಾನೇ ಸಾಧ್ಯ? ನಾನು ಬದುಕಿರುವವರೆಗೂ ನಿನ್ನನ್ನು ಮರೆಯಲು ಸಾಧ್ಯವೇ ಇಲ್ಲ' ಎಂದೆ.

ಸ್ವಲ್ಪ ಸಮಯದ ನಂತರ, ತನ್ನ ಹಳೆಯ ಆಟ ಶುರು ಮಾಡಿದಳು. ನಾಕ್, ನಾಕ್ (ಟಕ್, ಟಕ್ ಬಾಗಿಲು ಕುಟ್ಟಿದ ಶಬ್ದ) ಎಂದಳು. ಈ ಆಟವನ್ನು ಬಹು ಬಾರಿ ಆಡುತ್ತಿದ್ದರಿಂದ ನಾನು ಸಹಜವಾಗಿಯೇ, 'ಹೂ ಈಸ್ ದೇರ್?'(ಯಾರಲ್ಲಿ?) ಎಂದೆ.

ಮರುಕ್ಷಣ ಹಿಂದಿನ ಸೀಟಿನಲ್ಲಿ ಗಂಗಾ–ಜಮುನಾರ ಪ್ರವಾಹ ಶುರುವಾಯ್ತು.

'ಅಮ್ಮಾ, ನೀನು ನನ್ನ ಮರೆಯಲ್ಲ ಅಂತ ಈಗ ತಾನೇ ಹೇಳಿದೆ. ಈಗಾಗ್ಲೇ ಯಾರು ಅಂತ ಕೇಳ್ತಿದ್ದೀಯ ಹೂ... ಹೂ...' ಅಂತ ಅವ್ಳು ಹೇಳ್ತಿರುವಾಗಲೇ ಏನು ಹೇಳಲು ತೋಚದೆ, ನಗಲೂ ಆಗದೆ ಕಕ್ಕಾವಿಕ್ಕಿಯಾಗುವ ಸರದಿ ನನ್ನದ್ದಾಯ್ತು!

**ಪ್ರೇಮಲತಾ ಬಿ., ತುಮಕೂರು**

## ಉತ್ತರವಿಲ್ಲದ ಪ್ರಶ್ನೆ

ಈಗಿನ ಮಕ್ಕಳೇ ಹಾಗೆ. ವಿಪರೀತ ಚೂಟಿ. ಏನಾದರೊಂದು ಉಪದೇಶ ಮಾಡಿದರೆ ಅದಕ್ಕೆ ಪ್ರತಿಯಾಗಿ ಅವರಿಂದ ಉತ್ತರವೇ ಇಲ್ಲದ ಪ್ರಶ್ನೆ ಇದ್ದದ್ದೆ. ಮೊನ್ನೆ ಹಾಗೇ ಆಯಿತು. ಪಕ್ಕದ ಮನೆಯ ಯುಕೆಜಿಗೆ ಪದಾರ್ಪಣೆ ಮಾಡುತ್ತಿರುವ ತುಂಟ ಪೋರ ಆಯುಷ್‌ಗೆ ನನ್ನ ಹೆಂಡತಿ, 'ಮರೀ ಗಿಡಗಳ ಎಲೆ ಹರಿಯಬಾರದು, ಟೊಂಗೆ ಮುರಿಯಬಾರದು, ಹೂವು ಹರಿಯಬಾರದು. ಗಿಡಕ್ಕೆ ನೋವಾಗುತ್ತದೆ' ಎಂದು ಪೂರ್ತಿ ಹೇಳಿಯೂ ಮುಗಿದಿರಲಿಲ್ಲ. ತಕ್ಷಣ ಆ ಪೋರ ಪ್ರಶ್ನಿಸಿದ, 'ಹಾಗಾದರೆ ನೀವು ಪ್ರತಿ ದಿನವೂ ಗಿಡದಿಂದ ಕರಿಬೇವಿನ ಎಲೆಗಳನ್ನು ಕೀಳುತ್ತೀರಲ್ಲ! ಅದು ಸರಿಯೇ?' ಎಂದ!

**ದೇವಿದಾಸ ಸುವರ್ಣ**



ಚಿತ್ರಗಳು: ಗಣೇಶ ಆಚಾರ್ಯ